"ಮತ್ತೆ ಒಂಟೆಗಳು ಏಕೋ..." ಕೇಳಿದಳು ಸಾವಿತ್ರಿ.

ಚಂದ್ರು ವಿಚಿತ್ರವಾಗಿ ನೋಡಿದ. ನಾಳೆ ಕೋರ್ಟಿನಲ್ಲಿ ಜಡ್ಜ್ ಎದುರಿಗೆ ಏನು ಹೇಳುತ್ತಾಳಪ್ಪಾ ಎಂದು ಅವನಿಗೆ ಭಯವಾಯಿತು. ದಿಯಾ ಕುರಿತು ಮನೆ ಬಳಿಯೇ ಹೇಳಿದ್ದ. ಬರುವಾಗ ವಿಮಾನದಲ್ಲಿಯೂ ವಿವರವಾಗಿ ಹೇಳಿದ್ದ. ಈಗ ಮತ್ತೆ ಹೊಸದಾಗಿ ಕೇಳುತ್ತಿದ್ದರೆ ಕಿರಿಕಿರಿಯಾಯಿತು. ಆದರೂ ತಾಳ್ಮೆಯಿಂದ ಹೇಳಿದ.

"ಇಲ್ಲಿ ಷರಿಯತ್ ಕಾನೂನು ದೊಡ್ಡಮ್ಮಾ. ತಪ್ಪಿಗೆ ಶಿಕ್ಷೆಗಳು ಬೇರೆಯದೇ ರೀತಿಯಾಗಿರುತ್ತವೆ. ಕಾಲಿಗೆ ಕಾಲು, ಕೈಗೆ ಕೈ, ಪ್ರಾಣಕ್ಕೆ ಪ್ರಾಣ. ಹತ್ಯೆ ಕೇಸುಗಳಲ್ಲಿ ಒಂದು ಪರಿಷ್ಕಾರ ಇರುತ್ತದೆ. ಸತ್ತ ವ್ಯಕ್ತಿಯ ಕುಟುಂಬದವರು ಕ್ಷಮಾಭಿಕ್ಷೆ ನೀಡಿದರೆ ಕೊಲೆ ಮಾಡಿದವನನ್ನು ನೇಣಿಗೇರಿಸದೆ ಬಿಟ್ಟುಬಿಡುತ್ತಾರೆ. ಅದಕ್ಕೆ ಆತ ಈ ಕುಟುಂಬಕ್ಕೆ ನೂರು ಒಂಟೆಗಳನ್ನು ನೀಡಬೇಕು. ಹಿಂದೆಲ್ಲಾ ಅರಬ್ಬರ ಜೀವನ ಮಾರ್ಗವೇ ಒಂಟೆಗಳಲ್ಲವಾ... ಹಾಗೆ ಲೆಕ್ಕ ಹಾಕುತ್ತಿದ್ದರು. ಈಗ ಒಂಟೆಗಳು ಇಲ್ಲವಲ್ಲ... ಹಣ ಕೊಡುತ್ತಿದ್ದಾರೆ" ಎಷ್ಟು ಬೇಡವೆಂದುಕೊಂಡರೂ ಮಾತಾಡುವಾಗ ಕಿರಿಕಿರಿ.

"ಪ್ರಾಣ ಅಂದರೆ ಅಷ್ಟು ಸಲೀಸಾ ಇಲ್ಲಿ..." ಎಂದಳು ನೋವಿನಿಂದ ಸಾವಿತ್ರಿ.

ಚಂದ್ರುವಿಗೆ ನಗು ಬಂದಿತು. "ದೊಡ್ಡಮ್ಮ ಇದಕ್ಕಿಂತಲೂ ಹೆಚ್ಚು ನಿರೀಕ್ಷಿಸುತ್ತಿದ್ದಾಳಾ" ಎಂದು ಅನುಮಾನ ಬಂದಿತು ಅವನಿಗೆ.

'ನೂರು ರೂಪಾಯಿಗಳಿಗೆ ಕೂಡ ಹತ್ಯೆಗಳಾಗುತ್ತಿವೆ ದೊಡ್ಡಮ್ಮಾ... ಇಲ್ಲೇ ಅಲ್ಲ ಎಲ್ಲಾದರೂ ಪ್ರಾಣ ಅಗ್ಗವೇ' ಎಂದು ಹೇಳಹೊರಟವನಿಗೆ ತಡೆದಂತೆ ದೀರ್ಘ ನಿಟ್ಟುಸಿರಿಟ್ಟು, "ಹೌದು ಕಣೋ... ತಲೆಗಳಿಗೆ ಸರ್ಕಾರವೇ ಬೆಲೆ ಕಟ್ಟುತ್ತಿವೆ ಅಲ್ಲವಾ" ಎಂದಳು.

ರಾತ್ರಿ ಒಂದು ಗಂಟೆ ದಾಟಿರುವುದಕ್ಕೆ ಸೂಚನೆಯೆಂಬಂತೆ ಬಲ್ದಿಯಾಸೆಕ್ಯುರಿಟಿ ವ್ಯಾನ್ ಸೈರನ್ ಸದ್ದು. ಆ ಸದ್ದು ಕೇಳುತ್ತಿದ್ದಂತೆಯೇ ಚಂದ್ರುವಿಗೆ ನಾಗರಾಜು ನೆನಪಾದ. ಕೆಟ್ಟಕನಸಿನಂತಹ ಆ ಸಾವು ನೆನಪಾಯಿತು. ಭಯದಿಂದ ಹೊದಿಕೆ ಹೊದ್ದುಕೊಳ್ಳುತ್ತಾ, "ನೂರು ಒಂಟೆಗಳೆಂದರೆ ಕಡಿಮೆಯೇನಲ್ಲ ದೊಡ್ಡಮ್ಮಾ... ಇಪ್ಪತ್ತೈದು ಲಕ್ಷ" ಎಂದ.

"ಈ ದುಬೈನಲ್ಲಾದರೂ ಪರವಾಗಿಲ್ಲ ದೊಡ್ಡಮ್ಮ, ಇಷ್ಟಾದರೂ ಕೊಡುತ್ತಿದ್ದಾರೆ. ಇದು ಸೌದಿಯೋ, ಕತ್ತರ್‌ನಲ್ಲೋ ಆಗಿದ್ದರೆ ಮುಸ್ಲಿಮರಿಗೆ ಈ ರೇಟು. ನಮಗೆ ಇದರಲ್ಲಿ ಅರ್ಧವೇ. ಹೆಂಗಸರಿಗಾದರೆ ಅರ್ಧದಲ್ಲಿ ಅರ್ಧ..." ಎಂದ ಚಂದ್ರು.

"ಪ್ರಾಣವೇ ಹೋದ ಮೇಲೆ ಈ ಪಾಪದ ಹಣ ಏತಕ್ಕೋ... ನಾನು ಒಂದು ಪೈಸೆ ಮುಟ್ಟುವುದಿಲ್ಲ." ಮನಸ್ಸಿನಲ್ಲಿ ದೃಢವಾಗಿ ಅಂದುಕೊಂಡಳು ಸಾವಿತ್ರಿ.

"ದೊಡ್ಡಮ್ಮಾ... ನಾಳೆ ಕೋರ್ಟಿನಲ್ಲಿ ಜಡ್ಜ್ ಎರಡೆರಡು ಬಾರಿ ಕೇಳುತ್ತಾರೆ. ಯಾವಾಗ ಕೇಳಿದರೂ 'ತಾನಾಜಿಲ್' ಎಂದು ಒಂದೇ ಮಾತು ಹೇಳಬೇಕು. ಅಂದರೆ ನಾನು ದಿಯಾಗೆ ಒಪ್ಪಿ ಆತನನ್ನು ಕ್ಷಮಿಸುತ್ತಿದ್ದೇನೆ ಎಂಬಂತೆ" ಮತ್ತೊಮ್ಮೆ ನೆನಪಿಸಿದ ಚಂದ್ರು.

"ಇಲ್ಲ... ಹಾಗೆ ಮಾತ್ರ ಹೇಳುವುದಿಲ್ಲ. ನನ್ನ ಮಗನನ್ನು ಸಾಯಿಸಿದವನನ್ನು ಬಿಡಬೇಡಿ ಎನ್ನುತ್ತೇನೆ. ಕಸಾಸ್... ಕಸಾಸ್ ಎನ್ನುತ್ತೇನೆ." ಹಗೆಯಿಂದ ಮನಸ್ಸಿನಲ್ಲಿ ಅಂದುಕೊಂಡಳು ಸಾವಿತ್ರಿ.

ಆಕೆ ಮೌನವಾಗಿರುವುದನ್ನು ನೋಡಿ ಅನುಮಾನದಿಂದ,

"ದೊಡ್ಡಮ್ಮಾ... ಅರ್ಥವಾಯಿತಾ" ಎಂದನು ಚಂದ್ರು.

"ಊಂ... ಸರಿ ಕಣೋ..." ಎಂದಳು ಸಾವಿತ್ರಿ ಕಣ್ಣು ಮುಚ್ಚುತ್ತಾ.

ಮುಚ್ಚಿದ ಕಣ್ಣ ಹಿಂದೆ ಹಿಂದಿನದೆಲ್ಲಾ ನೆರಳಿನಂತೆ ಚಲಿಸತೊಡಗಿತು. ತಂದೆಯ ಸಾವು, ಗಂಡನ ಸಾವು, ಮಗನ ಸಾವು, ಈ ಸಾವುಗಳ ಹಿಂದಿದ್ದ ಕಾರಣಗಳು ನೆನಪಾಗುತ್ತಿವೆ. ಐದಾರು ವರ್ಷ